# ರಾಮ್ ಗೋಪಾಲ್ ವರ್ಮಾ: ಖಾಲಿ ಸರಕು?

ಕೊರೊನಾ ಕಾಲದಲ್ಲಿ ಚಿತ್ರರಂಗದ ಸಂಕಷ್ಟ ಏನೇ ಇರಲಿ, ನಿರ್ದೇಶಕ ನಿರ್ಮಾಪಕ ರಾಮ್ ಗೋಪಾಲ್ ವರ್ಮಾ ಸಿನಿಮಾ ಮಾಡುವುದನ್ನು ಬಿಟ್ಟಿಲ್ಲ. ಒಂದರ ಹಿಂದೆ ಒಂದರಂತೆ ಆರ್‌ಜಿವಿ ನಿರ್ದೇಶಿಸಿದ ಸಿನಿಮಾಗಳು ಒಟಿಟಿಯಲ್ಲಿ ಬಿಡುಗಡೆಯಾಗುತ್ತಲೇ ಇವೆ. ಕ್ಲೈಮ್ಯಾಕ್ಸ್, ನಗ್ನಂ, ಪವರ್‌ಸ್ಟಾರ್ ಹೀಗೆ ಸಾಲು ಸಾಲು ಚಿತ್ರಗಳು ಒಟಿಟಿಯಲ್ಲಿ ಬಂದು ಹೋದವು. ಈ ಚಿತ್ರಗಳು ವರ್ಮಾಗೆ ನಷ್ಟ ಉಂಟು ಮಾಡಿದವೋ, ಲಾಭ ಗಳಿಸಿದವೋ ಒಂದೂ ಗೊತ್ತಾಗಲಿಲ್ಲ. ಆದರೆ ಜಾಲತಾಣದಲ್ಲಿ ಆರ್‌ಜಿವಿ ಸದಾ ಸುದ್ದಿಯಲ್ಲಿರುವಂತೆ ನೋಡಿಕೊಂಡವು. ಬಹುತೇಕ ಎಲ್ಲ ಚಿತ್ರಗಳಲ್ಲೂ ಸೆಕ್ಸ್ ಮತ್ತು ಕ್ರೈಮ್‌ಗಳ ಮಿಶ್ರಣ ಉಣಬಡಿಸುತ್ತಿರುವ ವರ್ಮಾ, ಆ ಕಾರಣಕ್ಕಾಗಿಯೇ ಯುವಜನರ ಕುತೂಹಲ ಕೆರಳಿಸುತ್ತಲೇ ಇದ್ದಾರೆ. 'ಥ್ರಿಲ್ಲರ್' ಮತ್ತು 'ಡೇಂಜರಸ್' ಸಿನಿಮಾಗಳೂ ಸೆಕ್ಸ್ ಮತ್ತು ಕ್ರೈಮ್ ಹಾದಿಯಲ್ಲೇ ಇವೆ. ಈ ಎರಡೂ ಚಿತ್ರಗಳಲ್ಲಿ ನಾಯಕಿ ಆಗಿರುವ ಒರಿಯಾದ ನಟಿ ಅಪ್ಸರಾ ರಾಣಿಯ ಜೊತೆಗೆ ವರ್ಮಾ ನಿಕಟ ಭಂಗಿಯಲ್ಲಿರುವ ಸ್ಟಿಲ್‌ಗಳೂ ಜಾಲತಾಣಗಳಲ್ಲಿ ರಾರಾಜಿಸುತ್ತಿವೆ.

ಚಿತ್ರರಂಗದಲ್ಲಿ ಮೂರು ದಶಕಗಳನ್ನು ಕಂಡಿರುವ ವರ್ಮಾ, ಇತ್ತೀಚೆಗೆ ಹಲವು ವಿವಾದಗಳನ್ನೂ ಮೈಮೇಲೆ ಎಳೆದುಕೊಂಡಿದ್ದಾರೆ. 2018ರಲ್ಲಿ ಮರ್ಯಾದಾ ಹತ್ಯೆಯಾಗಿ ಸುದ್ದಿ ಮಾಡಿದ ಪ್ರಣಯ್ ಎನ್ನುವ ಯುವಕನ ಕೊಲೆಯನ್ನು ಆಧರಿಸಿ ವರ್ಮಾ ಮಾಡುತ್ತಿರುವ ಸಿನಿಮಾ ವಿರುದ್ಧ ಈಗ ಮೊಕದ್ದಮೆಯೂ ದಾಖಲಾಗಿದೆ. ಮೇಲ್ಜಾತಿಯ ಶ್ರೀಮಂತ ತರುಣಿಯನ್ನು ಪ್ರೇಮಿಸಿದ ಕೆಳಜಾತಿಯ ಪ್ರಣಯ್‌ನನ್ನು ಬರ್ಬರವಾಗಿ ಕೊಲ್ಲಲಾಯಿತು. ಕೊಲೆಯ ಆರೋಪಿಯಾಗಿದ್ದ ಹುಡುಗಿಯ ಅಪ್ಪ ಕೂಡಾ ಬಳಿಕ ಆತ್ಮಹತ್ಯೆ ಮಾಡಿಕೊಂಡ. ಈ ಘಟನೆಯನ್ನೇ ಇಟ್ಟುಕೊಂಡು ವರ್ಮಾ ಸಿನಿಮಾ ನಿರ್ದೇಶಿಸುತ್ತಿದ್ದಾರೆ. 'ತಮ್ಮ ಅನುಮತಿ ಇಲ್ಲದೆ ಫೋಟೊಗಳನ್ನು ಬಳಸಿದ್ದಾರೆ. ಚಿತ್ರದ ಮೂಲಕ ಸಮಾಜದಲ್ಲಿ ವೈಷಮ್ಯ ಉಂಟು ಮಾಡುತ್ತಿದ್ದಾರೆ' ಎಂದು ಪ್ರಣಯ್ ತಂದೆ ಬಾಲಸ್ವಾಮಿ ತೆಲಂಗಾಣದ ಮಿರ್‍ಯಾಲಗುಡದಲ್ಲಿ ನೀಡಿರುವ ದೂರಿನಂತೆ ವರ್ಮಾ ವಿರುದ್ಧ ಮೊಕದ್ದಮೆ ದಾಖಲಾಗಿದೆ.

ತನ್ನ ಹೊಸ ಚಿತ್ರಕ್ಕೆ 'ಅಲ್ಲು' ಎನ್ನುವ ಹೆಸರಿಡುವ ಮೂಲಕ ಆರ್‌ಜಿವಿ ಉಂಟು ಮಾಡಿದ ವಿವಾದ ಇನ್ನೂ ಹಾಗೆಯೇ ಇದೆ. ಈ ಮಧ್ಯೆ ಉತ್ತರಪ್ರದೇಶದಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಮೃತಪಟ್ಟ ಮೊನಿಷಾ ಎನ್ನುವ ದಲಿತ ಹುಡುಗಿಯ ಕುರಿತು ಟ್ವೀಟ್ ಮಾಡಿರುವ ವರ್ಮಾ, ತನ್ನ ಹೊಸ ಚಿತ್ರ 'ದಿಶಾ ದಿ ಎನ್‌ಕೌಂಟರ್'ನ ಪ್ರಚಾರಕ್ಕೆ ಮುಂದಾಗಿದ್ದಾರೆ. "ದೆಹಲಿಯ ನಿರ್ಭಯಾ, ಹೈದರಾಬಾದಿನ ದಿಶಾ ಬಳಿಕ ಈಗ ಮೊನಿಷಾ ಅತ್ಯಾಚಾರ ಪ್ರಕರಣ ಸುದ್ದಿ ಮಾಡಿದೆ. ಹೆಣ್ಣುಮಕ್ಕಳನ್ನು ಹೀಗೇಕೆ ಅತ್ಯಾಚಾರ ಮಾಡಿ ಕೊಲೆ ಮಾಡಲಾಗುತ್ತಿದೆ ಎನ್ನುವುದಕ್ಕೆ ಉತ್ತರ ನನ್ನ 'ದಿಶಾ' ಚಿತ್ರದಲ್ಲಿದೆ" ಎಂದಿದ್ದಾರೆ ವರ್ಮಾ.

ಎಷ್ಟೋ ಸಲ ಸಿನಿಮಾಗಳೇ ಅತ್ಯಾಚಾರಕ್ಕೆ ಪ್ರೇರಣೆ ನೀಡುತ್ತವೆ ಎನ್ನುವ ಆರೋಪಗಳಿವೆ. ವರ್ಮಾ ಅವರ ಚಿತ್ರಗಳಲ್ಲಿ ಹೆಣ್ಣನ್ನು ಪ್ರಚೋದಕವಾಗಿ ತೋರಿಸುವುದು ಮಾಮೂಲಿ ಎಂಬಂತಾಗಿದೆ. ಅವರ ಹೊಚ್ಚ ಹೊಸ ತೆಲುಗು ಚಿತ್ರದ ಹೆಸರು 'ಎಂಟರ್ ದಿ ಗರ್ಲ್ ಡ್ರಾಗನ್' ಎಂದಿದೆ. ವರ್ಮಾ ಕಾರ್ಖಾನೆಯಲ್ಲಿ ಸಿನಿಮಾ ಸರಕು ಮುಗಿದು ಎಷ್ಟೋ ಕಾಲವಾಗಿದೆ ಎನ್ನುವುದು ಈಗ ಎಲ್ಲರೂ ಹೇಳುವ ಮಾತು. ■





# ವಾಣಿ ಕಪೂರ್ ಖುಷಿ

ಕೊರೊನಾ ಕಾಲದಲಿ ಹೊರಾಂಗಣದ ಚಿತ್ರೀಕರಣ ಆರಂಭಿಸಿ, ಮುಗಿಸಿದ ಮೊದಲ ಚಿತ್ರ ಅಕ್ಷಯ ಕುಮಾರ್ ಮತ್ತು ವಾಣಿ ಕಪೂರ್ ನಟಿಸಿರುವ 'ಬೆಲ್‌ಬಾಟಂ' ಎನ್ನಲಾಗಿದೆ. ಚಿತ್ರೀಕರಣ ಸ್ಕಾಟ್ಲೆಂಡ್‌ನಲ್ಲಿ ಯಶಸ್ವಿಯಾಗಿ ಮುಗಿದದ್ದಕ್ಕೆ ವಾಣಿ ಕಪೂರ್ ಚಿತ್ರತಂಡಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

'ಚಿತ್ರದ ಶೂಟಿಂಗ್ ಒಳ್ಳೆಯ ಅನುಭವ. ತಮಾಷೆಯಾಗಿಯೂ ಇತ್ತು. ಕೊರೊನಾದ ಅಡೆತಡೆಗಳನ್ನು ಚಿತ್ರತಂಡ ಅತ್ಯಂತ ಎಚ್ಚರಿಕೆಯಿಂದ ನಿಭಾಯಿಸಿದೆ. ನಾವು ಸೆಟ್‌ನಲ್ಲಿ ಅತ್ಯಂತ ಸುರಕ್ಷಿತವಾಗಿ ಇರುವಂತೆ ನೋಡಿಕೊಂಡಿದ್ದಾರೆ. ಸ್ಕಾಟ್ಲೆಂಡ್‌ಗೆ ವಿಮಾನ ಹತ್ತುವಾಗ ನನಗೆ ಸ್ವಲ್ಪ ಭಯ ಇತ್ತು. ಆದರೆ ಚಿತ್ರೀಕರಣದ ತಾಣದಲ್ಲಿ ಆ ಭಯವೂ ಹೊರಟುಹೋಯಿತು' ಎಂದಿದ್ದಾರೆ ವಾಣಿ.

ವಾಣಿ ಕಪೂರ್‌ಗೆ ಬಾಲಿವುಡ್‌ನಲ್ಲಿ ಬೇಡಿಕೆ ಹೆಚ್ಚುತ್ತಿದೆ. ಮುಂದಿನ ಚಿತ್ರದಲ್ಲಿ ಆಕೆಗೆ ಆಯುಷ್ಮಾನ್ ಖುರಾನಾ ನಾಯಕ. ಅಭಿಷೇಕ್ ಕಪೂರ್ ನಿರ್ದೇಶನದ ಈ ಚಿತ್ರದ್ದೂ ಲವ್‌ಸ್ಟೋರಿ. 'ಆಯುಷ್ಮಾನ್ ನಮ್ಮ ಕಾಲದ ಅತ್ಯಂತ ಪ್ರತಿಭಾವಂತ ನಟ. ನನಗೆ ಆತನ ಜೊತೆಗೆ ನಟಿಸಲು ಥ್ರಿಲ್ ಆಗುತ್ತಿದೆ' ಎನ್ನುವುದು ವಾಣಿಯ ಮಾತು. 'ಬೇಫಿಕ್ರೆ'ನಲ್ಲಿ ವಾಣಿಯ ಅದ್ಭುತ ನಟನೆ ನೋಡಿ ನಿರ್ದೇಶಕ ಅಭಿಷೇಕ್ ಕಪೂರ್ ಈ ಚಿತ್ರಕ್ಕೆ ಆಯ್ಕೆ ಮಾಡಿದ್ದಾರಂತೆ. ಅಕ್ಟೋಬರ್‌ನಲ್ಲಿ ಶೂಟಿಂಗ್ ಶುರುವಾಗಲಿದೆಯಂತೆ.

■ ಬಿಂದು